**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಬಿಟಿಇ/04/ಇಎಪಿ/2019

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು-560 001,
ದಿನಾಂಕ:27.12.2019.

**ಅಧಿಸೂಚನೆ**

**ವಿಷಯ:** ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ನಡೆಸುವ 2020ರ ಮಾರ್ಚ್/ಏಪ್ರಿಲ್ ಸೆಮಿಸ್ಟರ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಬಗ್ಗೆ.
(ವಿದ್ಯಾರ್ಥಿಗಳಿಗೆ ಮಾತ್ರ)

**ಉಲ್ಲೇಖ:**
1 ಈ ಕಛೇರಿ ನೋಟಿಫಿಕೇಷನ್ ಸಂಖ್ಯೆ:ಬಿಟಿಇ/24/ಇಎಪಿ/97, ದಿ:31-12-97.
2 ಸರ್ಕಾರಿ ಆದೇಶ ಸಂ:ಇಡಿ/1/ಟಿಪಿಇ 98, ದಿನಾಂಕ:11-08-2000
3 ಸರ್ಕಾರಿ ಆದೇಶ ಸಂ:ಇಡಿ/257/ಟಿಪಿಇ/2003, ದಿ:31-3-2004
4 ಸರ್ಕಾರಿ ಆದೇಶ ಸಂ:ಇಡಿ/11/ಟಿಪಿಇ/2007 ಬೆಂಗಳೂರು, ದಿ:3-12-2007
5 ಸರ್ಕಾರಿ ಆದೇಶ ಸಂ:ಇಡಿ/215/ಟಿಪಿಇ/2010, ದಿ:2-8-2010
6 ಸರ್ಕಾರಿ ಆದೇಶ ಸಂ:ಸಕಇ/357/ಬಿಎಂಎಸ್/2012, ಬೆಂಗಳೂರು, ದಿ:7.11.2012
7 ಸರ್ಕಾರಿ ಆದೇಶ ಸಂಖ್ಯೆ:ಇಡಿ/222/ಟಿಪಿಇ/2012, ಬೆಂಗಳೂರು, ದಿನಾಂಕ: 17ನೇ ಸೆಪ್ಟೆಂಬರ್ 2012.

-0-

ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಪರೀಕ್ಷಾ ಮಂಡಳಿಯ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಮಾರ್ಚ್/ಏಪ್ರಿಲ್ 2020ರ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ (Technical / Non-Technical Student) ಶುಲ್ಕ ಪಾವತಿಸುವ ಬಗ್ಗೆ ಸಂಪೂರ್ಣ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ.

ಅಂತಹ ವಿದ್ಯಾರ್ಥಿಗಳು ತಮ್ಮ ಸಂಸ್ಥೆಯಲ್ಲಿ ನಿಗಧಿತ ದಿನಾಂಕದ ಒಳಗೆ ನಿಗಧಿತ ಶುಲ್ಕ ಪಾವತಿಸಲು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿದೆ. ತಪ್ಪಿದಲ್ಲಿ ಈ ಕೆಳಗೆ ತಿಳಿಸಲಾದ ಪ್ರಕಾರ ನಿಗದಿಪಡಿಸಲಾದ ದಂಡ ಪಾವತಿಸಬೇಕಾಗುತ್ತದೆ.

1. **ಸಂಸ್ಥೆಯಲ್ಲಿ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ವಿವರ:**

**ದಂಡರಹಿತ:**

ಎ) ದಿನಾಂಕ: **31-12-2019** ರಿಂದ 31-01-2020 **ರವರೆಗೆ**(ಎರಡೂ ದಿನಗಳು ಸೇರಿ) ದಂಡ ರಹಿತವಾಗಿ.

**ದಂಡಸಹಿತ:**

ಬಿ)ಮೊದಲನೇ ಹಂತ ದಿನಾಂಕ:01-02-2020 ರಿಂದ 08-02-2020 ರವರೆಗೆ (ಎರಡೂ ದಿನಗಳೂ ಸೇರಿ) ರೂ.50-00 (ರೂಪಾಯಿ ಐವತ್ತು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಸಿ)ಎರಡನೇ ಹಂತ ದಿನಾಂಕ: **10-02-2020 ರಿಂದ 17-02-2020** ರವರೆಗೆ (ಎರಡೂ ದಿನ ಸೇರಿ) ರೂ.100/- (ರೂಪಾಯಿ ನೂರು ಮಾತ್ರ) ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ.

ಡಿ)ಮೂರನೇ ಹಂತ ದಿನಾಂಕ:18-02-2020 **ರಿಂದ 24-02-2020** ರವರೆಗೆ(ಎರಡೂ ದಿನ ಸೇರಿ) ರೂ.200/- (ರೂಪಾಯಿ ಇನ್ನೂರು ಮಾತ್ರ) ದಂಡ ಶುಲ್ಕದೊಡನೆ.

ಈ) ನಾಲ್ಕನೇ ಹಂತ ದಿನಾಂಕ:25-02-2020 ರಿಂದ 02-03-2020 ರವರೆಗೆ (ಎರಡೂ ದಿನ ಸೇರಿ) ರೂ.400/- (ರೂಪಾಯಿ ನಾಲ್ಕು ನೂರು ಮಾತ್ರ) ದಂಡ ಶುಲ್ಕದೊಡನೆ.

ಎಫ್) ದಿನಾಂಕ:**03-03-2020** ರಿಂದ ಪರೀಕ್ಷೆ ಪ್ರಾರಂಭವಾಗುವ **15** ದಿನಗಳ ಮೊದಲು ರೂ.**2,000-00** (ರೂಪಾಯಿ ಎರಡು ಸಾವಿರ ಮಾತ್ರ) ವಿಶೇಷ ದಂಡ ಶುಲ್ಕದೊಡನೆ ಪ್ರತಿ ಸೆಮಿಸ್ಟರ್ ಪರೀಕ್ಷೆಗೆ. [ಈ ಶುಲ್ಕ ಪಾವತಿಸುವ ಮುನ್ನ ನಿರ್ದೇಶಕರು / ಕಾರ್ಯದರ್ಶಿ, ಇವರಿಂದ ಲಿಖಿತ ಅನುಮತಿ ಪಡೆಯತಕ್ಕದ್ದು. ವಿಶೇಷ ಶುಲ್ಕ ಪಾವತಿಸಲು ವಿದ್ಯಾರ್ಥಿಯು ತನ್ನ ಅರ್ಜಿಯನ್ನು ಸಂಸ್ಥೆಯ ಮುಖಾಂತರ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿಯ ಜೊತೆಯಲ್ಲಿ ಆತನ ಸಂಪೂರ್ಣ ಹಾಜರಾತಿ ಮಾಹಿತಿ ಹಾಗೂ ಎಲ್ಲಾ ಪರೀಕ್ಷೆಗಳ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲು ತಿಳಿಸಲಾಗಿದೆ.]

**ಸೂಚನೆ(i) ಉಲ್ಲೇಖ(2)ರ ಸರ್ಕಾರಿ ಆದೇಶದ ಪ್ರಕಾರ ಸಂಸ್ಥೆಯ ಪ್ರಿನ್ಸಿಪಾಲರು ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಈ ಕೆಳಕಂಡಂತೆ ಪಡೆಯತಕ್ಕದ್ದು.**

| | | |
|---|---|---|
| ಅ) | ಪ್ರತಿ ಸೆಮಿಸ್ಟರ್‌ನ ಪೂರ್ತಿ ಪರೀಕ್ಷೆಗೆ | ರೂ.300-00 |
| ಆ) | ಪ್ರತಿ ಸೆಮಿಸ್ಟರ್‌ನ 1 ವಿಷಯಕ್ಕೆ | ರೂ.200-00 |
| ಇ) | ಪ್ರತಿ ಸೆಮಿಸ್ಟರ್‌ನ 2 ವಿಷಯಕ್ಕೆ | ರೂ.200-00 |
| ಈ) | ಪ್ರತಿ ಸೆಮಿಸ್ಟರ್‌ನ 3 ವಿಷಯಕ್ಕೆ | ರೂ.300-00 |

**ಸೂಚನೆ(ii) ಪರೀಕ್ಷಾ ಶುಲ್ಕದೊಂದಿಗೆ ಪ್ರತಿ ಪರೀಕ್ಷೆಯ ಅಂಕಪಟ್ಟಿಗಾಗಿ ರೂ.50-00 ಪಡೆಯುವಂತೆ ತಿಳಿಸಲಾಗಿದೆ.**

**ಸೂಚನೆ(iii) ತಾಂತ್ರಿಕ ಪರೀಕ್ಷಾ ಮಂಡಳಿಯ 174ನೇ ಕೇಂದ್ರ ಸಭೆಯ ನಿರ್ಣಯದಂತೆ C-03 ಪಠ್ಯಕ್ರಮದ I,II,III,IV, V & VI ನೇ ಸೆಮಿಸ್ಟರ್‌ಗಳ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ಪಠ್ಯ ವಿಷಯಗಳಿಗೆ 2020ರ ಮಾರ್ಚ್/ಏಪ್ರಿಲ್ ಪರೀಕ್ಷೆ ಕೊನೆಯ ಅವಕಾಶವಾಗಿದ್ದು, 2020ರ ಅಕ್ಟೋಬರ್/ನವೆಂಬರ್‌ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸಲಾಗಿದೆ.**

**ಸೂಚನೆ(iv)**

(ಎ) **ಪರೀಕ್ಷಾ ವಿಭಾಗಕ್ಕೆ ಸಂಬಂಧಪಟ್ಟಂತೆ ಪರೀಕ್ಷೆಯ ಎಲ್ಲಾ ರೀತಿಯ ಶುಲ್ಕಗಳನ್ನು ಖಜಾನೆ-2(K2) ಮುಖಾಂತರವೇ ಕಡ್ಡಾಯವಾಗಿ ಪಾವತಿಸತಕ್ಕದ್ದು.(0202-02-101-0-01 ಲೆಕ್ಕಶೀರ್ಷಿಕೆ)**

(ಬಿ) **ಪರೀಕ್ಷಾ ಶುಲ್ಕಗಳನ್ನು ಪಾವತಿಸುವ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರತ್ಯೇಕವಾಗಿ ಚಲನ್‌ಗಳನ್ನು ಜನರೇಟ್ ಮಾಡಿಸಿಕೊಂಡು K2 ಮುಖಾಂತರವೇ ಪಾವತಿಸತಕ್ಕದ್ದು.**

(ಸಿ) **K2 ಚಲನ್ ಸಂಖ್ಯೆಯನ್ನು BTELinx ವೆಬ್‌ಪೋರ್ಟಲ್‌ನೊಂದಿಗೆ ಜೋಡಿಸಲಾಗುವುದು. ವಿದ್ಯಾರ್ಥಿಯ K2 ಚಲನ್ ಸಂಖ್ಯೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರವನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ.**

(ಡಿ) **K2 ಚಲನ್ ಮುಖಾಂತರ ಪರೀಕ್ಷಾ ಶುಲ್ಕಗಳನ್ನು ಪಾವತಿಸದಿದ್ದಲ್ಲಿ ಅದರಿಂದ ಮುಂದೆ ಉಂಟಾಗುವ ಬಾಧಕಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.**

**(ಈ)** **ಸರ್ಕಾರಿ ಆದೇಶ ಸಂಖ್ಯೆ: ಸಕಇ/178/ಪಕವಿ/2015, ಬೆಂಗಳೂರು, ದಿ:31.12.2015ರಲ್ಲಿ ನಿಗಧಿಪಡಿಸಿರುವಂತೆ ಹಾಗೂ ಕಾಲಕಾಲಕ್ಕೆ ಹೊರಡಿಸಲಾಗುವ ಚಾಲ್ತಿಗೆ ಬರುವ ಸರ್ಕಾರಿ ಆದೇಶಗಳನುಸಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ/ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

**(ಎಫ್)**** ಸರ್ಕಾರಿ ಆದೇಶ ಸಂಖ್ಯೆ:ಹಿಂವಇ/397/ಬಿಎಂಎಸ್/2013, ಬೆಂಗಳೂರು, ದಿನಾಂಕ:5-9-2013 ಮತ್ತು ಹಿಂವಕ/589/ಬಿಎಂಎಸ್/2013, ದಿ:5.10.2013 & ತಿದ್ದುಪಡಿ ಹಾಗೂ ಸೇರ್ಪಡೆ ಆದೇಶ ದಿ:6.8.2014 ಗಳಲ್ಲಿ ನಿಗದಿಪಡಿಸಿರುವಂತೆ ಪ್ರವರ್ಗ-1, 2ಎ, 3ಎ, & 3ಬಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ಆದಾಯದ ಮಿತಿಗಳಿಗನುಗುಣವಾಗಿ ಪರೀಕ್ಷಾ ಶುಲ್ಕ ವಿನಾಯಿತಿ ನೀಡುವುದು. ಆದರೆ ಪ್ರತಿ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ಮಾತ್ರ ಕಡ್ಡಾಯವಾಗಿ ಸದರಿ ವಿದ್ಯಾರ್ಥಿಗಳಿಂದ ಪಡೆಯುವಂತೆ ತಿಳಿಸಲಾಗಿದೆ.

(ಜಿ)** ಸರ್ಕಾರಿ ಆದೇಶ ಸಂಖ್ಯೆ:ಎಂಡಬ್ಲ್ಯುಡಿ/21/ಎಂಡಿಎಸ್/2011, ಬೆಂಗಳೂರು, ದಿ:2-8-2014 ಮತ್ತು ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲ್ಯುಡಿ /400/ಎಂಡಿಎಸ್/2014, ದಿ: 17.10.2014 ರ ಪ್ರಕಾರ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕುಟುಂಬದ ಆದಾಯವನ್ನು ನಿಗಧಿಪಡಿಸಲಾಗಿರುತ್ತದೆ ಹಾಗೂ ನಿಯಮಾನುಸಾರ ಉಲ್ಲೇಖ[2]ರ ಸರ್ಕಾರಿ ಆದೇಶದ ಪ್ರಕಾರ ಪರೀಕ್ಷಾ ಶುಲ್ಕವನ್ನು ಮತ್ತು ಪ್ರತಿ ಸೆಮಿಸ್ಟರ್ ಪರೀಕ್ಷೆಗೆ ಅಂಕಪಟ್ಟಿ ಶುಲ್ಕ ರೂ.50/- ನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ ಪಡೆಯುವಂತೆ ತಿಳಿಸಲಾಗಿದೆ.

(ಹೆಚ್) ಪರೀಕ್ಷಾ ಶುಲ್ಕ ವಿನಾಯಿತಿ ನೀಡುವ ಬಗ್ಗೆ ಸರ್ಕಾರಿ ಆದೇಶ ಸಂಖ್ಯೆ: ಸಕಇ/357/ಬಿಎಂಎಸ್/2012, ಬೆಂಗಳೂರು, ದಿನಾಂಕ:7.11.2012ರ ಆದೇಶವನ್ನು ಪಾಲಿಸುವುದು.

(ಐ) ಎಲ್ಲಾ ವರ್ಗದ ಅನುತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವವರು ಪರೀಕ್ಷಾ ಶುಲ್ಕ ಮಂಜೂರಾತಿ/ಮರುಪಾವತಿಗೆ ಅರ್ಹರಲ್ಲ. ಆದ್ದರಿಂದ ನಿಯಮಾನುಸಾರ ಪರೀಕ್ಷಾ ಶುಲ್ಕ ಪಾವತಿಸತಕ್ಕದ್ದು.

(ಜೆ) ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇಲ್ಲಿ ಯಾವುದೇ ಪರೀಕ್ಷಾ ಶುಲ್ಕವನ್ನು ಪಡೆಯಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಕಾಲಕಾಲಕ್ಕೆ ಹೊರಡಿಸಲಾದ ಅಧಿಸೂಚನೆಗಳು ಮತ್ತು ಸುತ್ತೋಲೆಗಳನ್ನು ಗಮನಿಸುವುದು ಮತ್ತು ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಂದ ಸ್ಪಷ್ಟನೆ ಕೋರಬಹುದಾಗಿದೆ.

**ವಿಶೇಷ ಸೂಚನೆ:**

(i) ಸಂಸ್ಥೆಯ ಪ್ರಾಚಾರ್ಯರುಗಳು ಪ್ರವೇಶ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕವನ್ನು ಕೂಡ ವಸೂಲು ಮಾಡುವುದು.

(ii) ಫಲಿತಾಂಶ ತಡೆ ಹಿಡಿಯಲಾದ/ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ಫಲಿತಾಂಶ ಪ್ರಕಟಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನು ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗುತ್ತದೆ.

(iii) **ಅಕ್ಟೋಬರ್/ನವೆಂಬರ್** 2019ರ ಪರೀಕ್ಷೆಗಳಲ್ಲಿ ಶಂಕಿತ ಪರೀಕ್ಷಾ ದುರಾಚಾರದಡಿ ಪ್ರಕರಣ ದಾಖಲಾಗಿದ್ದು ಪ್ರಕರಣ ಇತ್ಯರ್ಥವಾಗಿರದ ವಿದ್ಯಾರ್ಥಿಗಳಿಗೆ ಸದರಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮುಂದಿನ ಸೆಮಿಸ್ಟರ್ ತರಗತಿಗಳಿಗೆ ಹಾಜರಾಗಲು ಅನುಮತಿ ನೀಡಿ ದುರಾಚಾರ ಪ್ರಕರಣ ಇತ್ಯರ್ಥಗೊಂಡ ನಂತರ ಅರ್ಹ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶ ನೀಡುವುದು. ಮತ್ತು ಅಂತಹ ಪ್ರಕರಣಗಳ ಜವಾಬ್ದಾರಿಯನ್ನೂ ಕೂಡ ಪ್ರಾಚಾರ್ಯರೇ ತೆಗೆದುಕೊಳ್ಳಬೇಕಾಗಿರುತ್ತದೆ.

(iv) 4ನೇ ಮತ್ತು 6ನೇ ಸೆಮಿಸ್ಟರ್‌ಗಳಿಗೆ ಪ್ರವೇಶ ನೀಡುವಾಗ ಉಲ್ಲೇಖ(7)ರ ಸರ್ಕಾರಿ ಆದೇಶದಲ್ಲಿ ಕ್ರಮಸಂಖ್ಯೆ (8)ರಲ್ಲಿ ವಿವರಿಸಿರುವಂತೆ ನಡೆದುಕೊಳ್ಳುವುದು.

(v) ಮಾರ್ಚ್/ಏಪ್ರಿಲ್ 2020ರ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳ ವಿವರಗಳನ್ನು ಪರೀಕ್ಷಾ ಶುಲ್ಕ ಪಾವತಿಸಿದ ಕೂಡಲೇ ತಾವು ಈಗಾಗಲೇ ಉಪಯೋಗಿಸುತ್ತಿರುವ BTE Linx ಆನ್‌ಲೈನ್ ವೆಬ್‌ಪೋರ್ಟಲ್‌ನಲ್ಲಿ ಇರುವಂತಹ ಕ್ಯಾಂಡಿಡೇಟ್ ಲಿಸ್ಟ್‌ನಲ್ಲಿ **K2 ಮುಖಾಂತರ ಪರೀಕ್ಷಾ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ ನಮೂದಿಸಿರುವ** ಆಧಾರದ ಮೇಲೆ Update ಮಾಡಬೇಕಾಗಿರುತ್ತದೆ. ಈ ವಿವರಗಳ ಆಧಾರದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಸಂಸ್ಥೆಗಳಲ್ಲಿಯೇ ಮುದ್ರಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಪ್ರಾಚಾರ್ಯರುಗಳು ಹೆಚ್ಚಿನ ಮುತುವರ್ಜಿ ವಹಿಸಲು ತಿಳಿಸಲಾಗಿದೆ.

(vi) ಅಕ್ಟೋಬರ್/ನವೆಂಬರ್ 2019ರ ಪರೀಕ್ಷೆಗಳ ಮಾರ್ಕ್ಸ್ ಲೆಡ್ಜರ್‌ಗಳನ್ನು ಹಿಂದಿನಂತೆಯೇ ಈಗಾಗಲೇ ಉಪಯೋಗಿಸುತ್ತಿರುವ BTE Linx ಆನ್‌ಲೈನ್ ವೆಬ್‌ಪೋರ್ಟಲ್ ಮೂಲಕ ಸಂಬಂಧ ಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳು download ಮಾಡಿಕೊಳ್ಳಬೇಕಾಗುತ್ತದೆ.

(vii) ಪರೀಕ್ಷಾ ಶುಲ್ಕ ಪಾವತಿಸಲು ನಿಗದಿತ ಅರ್ಜಿ ನಮೂನೆಯನ್ನು ಬಿಟಿಇ ಲಿಂಕ್ಸ್ ಆನ್‌ಲೈನ್ ವೆಬ್‌ಪೋರ್ಟಲ್ ಮೂಲಕ ಅಥವಾ http://www.dte.kar.nic.in ವೆಬ್‌ಸೈಟ್‌ನಿಂದ ಡೌನ್ ಲೋಡ್ ಮಾಡಲು ತಿಳಿಸಲಾಗಿದೆ.

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ,

ಎಲ್ಲಾ ಸರ್ಕಾರಿ / ಅನುದಾನಿತ / ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಉಪ ನಿರ್ದೇಶಕರು (ಪರೀಕ್ಷೆ )
2. ಸಹಾಯಕ ನಿರ್ದೇಶರು (ಪರೀಕ್ಷೆ)
3. ಸಹಾಯಕ ನಿರ್ದೇಶಕರು (ತಾಂತ್ರಿಕ)
4. ಆಪ್ತಶಾಖೆ, ನಿರ್ದೇಶಕರ ಕಛೇರಿ, ನಿರ್ದೇಶನಾಲಯ, ಬೆಂಗಳೂರು.
5. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಸಹಾಯಕ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
8. ರಿಜಿಸ್ಟ್ರಾರ್ (ಪರೀಕ್ಷೆ)
9. ಅಧೀಕ್ಷಕರು (ಆರ್.ಡಿ.ಎಂ. (1) ರಿಂದ (15)
10. ಇಸಿಎಸ್/ಇಎಫ್‌ಎಸ್/ಇಆರ್‌ಎಸ್, ಮುಂದಿನ ಕ್ರಮಕ್ಕಾಗಿ.
11. ಇ-ಗವರ್ನೆನ್ಸ್ ವಿಭಾಗಕ್ಕೆ (ವೆಬ್ ಸೈಟ್‌ನಲ್ಲಿ ಪ್ರಕಟಿಸಲು)
12. ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,ಬೆಂಗಳೂರು
13. ಗಣಕ ಕೇಂದ್ರ-ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು.
14. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/09/ಇಸಿಎಸ್(2)/2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:27-12-2019

ಸುತ್ತೋಲೆ

ವಿಷಯ: ತಾಂತ್ರಿಕ ಪರೀಕ್ಷಾ ಮಂಡಳಿಯ 2003 ವರ್ಷದಲ್ಲಿ ಅಳವಡಿಸಲಾದ C-03 ಪಠ್ಯಕ್ರಮದ ವಿಷಯಗಳಿಗೆ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ವಿಷಯಗಳಿಗೆ 2020 ರ ಮಾರ್ಚ್/ಏಪ್ರಿಲ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅಂತಿಮ ಅವಕಾಶ ನೀಡುವ ಬಗ್ಗೆ.

ಉಲ್ಲೇಖ: ತಾಂತ್ರಿಕ ಪರೀಕ್ಷಾ ಮಂಡಳಿಯ 174ನೇ ಸಭೆಯ ನಿರ್ಣಯ ದಿ:27-12-2019

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2003 ರ ಸೆಮಿಸ್ಟರ್ C-03 ಪಠ್ಯಕ್ರಮದ ಒಂದು, ಎರಡು, ಮೂರು, ನಾಲ್ಕು, ಐದು ಮತ್ತು ಆರನೇ ಸೆಮಿಸ್ಟರ್‌ನ C-09 ಪಠ್ಯಕ್ರಮದಲ್ಲಿ ಸಮಾನತೆ ಇಲ್ಲದ ಪಠ್ಯ ವಿಷಯಗಳಿಗೆ 2019ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯೇ ಅಂತಿಮ ಅವಕಾಶವಾಗಿದ್ದು ನಂತರದ ಮುಂದಿನ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲ ಎಂದು ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿತ್ತು. ಆದರೆ ವಿದ್ಯಾರ್ಥಿ/ಪೋಷಕರ ಮನವಿಯ ಮೇರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯದ ಹಿತದೃಷ್ಟಿಯನ್ನು ಪರಿಗಣಿಸಿ ಸದರಿ ವಿದ್ಯಾರ್ಥಿಗಳಿಗೆ 2020 ರ ಮಾರ್ಚ್/ಏಪ್ರಿಲ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಅಂತಿಮ ಅವಕಾಶ ನೀಡಲಾಗಿದೆ. ಇದೇ ಕಟ್ಟಕಡೆಯ ಅವಕಾಶವಾಗಿದ್ದು ನಂತರದ ಮುಂದಿನ ಪರೀಕ್ಷೆಗಳಿಗೆ ಹಾಜರಾಗಲು ಅನುಮತಿ ನೀಡಲಾಗುವುದಿಲ್ಲವೆಂದು ತಿಳಿಸಲಾಗಿದೆ.

ಸಮಾನತೆ ಇಲ್ಲದ ಪ್ರತಿ ವಿಷಯಕ್ಕೆ ವಿದ್ಯಾರ್ಥಿಯಿಂದ ರೂ.1000/- ವಿಶೇಷ ಶುಲ್ಕವನ್ನು ಪಡೆಯಲು, ನಂತರದ ದಿನಗಳಲ್ಲಿ ವಿವಿಧ ಹಂತಗಳಲ್ಲಿ ಚಾಲ್ತಿಯಲ್ಲಿರುವ ಪರೀಕ್ಷಾ ಶುಲ್ಕಗಳ ಅಧಿಸೂಚನೆಯನುಸಾರ ದಂಡ ಶುಲ್ಕ ಸಹಿತವಾಗಿ ಪರೀಕ್ಷಾ ಶುಲ್ಕ ಪಡೆಯಲು ಸಂಬಂಧಿಸಿದ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ.

ಈ ವಿಷಯವನ್ನು ಎಲ್ಲಾ ವಿದ್ಯಾರ್ಥಿಗಳ, ಉಪನ್ಯಾಸಕರ ಮತ್ತು ಸಿಬ್ಬಂದಿ ವರ್ಗದವರ ಗಮನಕ್ಕೆ ತರುವಂತೆ ಮತ್ತು ಸಂಸ್ಥೆಯ ಸೂಚನಾ ಫಲಕದಲ್ಲಿ/ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಚುರಪಡಿಸಲು ತಿಳಿಸಲಾಗಿದೆ.

ಈ ಸುತ್ತೋಲೆಯನ್ನು ವಿದ್ಯಾರ್ಥಿಗಳ ವಿಳಾಸಕ್ಕೆ ತಪ್ಪದೇ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸಿ ದಾಖಲೆಯನ್ನು ಸಹ ಸಂಗ್ರಹಿಸಿಡಲು ಸೂಚಿಸಲಾಗಿದೆ.

27/12/19

ಕಾರ್ಯದರ್ಶಿ

ಇವರಿಗೆ,

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳ ಮಾಹಿತಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ.

ಪ್ರತಿ,

1) ಇ – ಗವರ್ನೆನ್ಸ್ ವಿಭಾಗಕ್ಕೆ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರಕ್ಕೆ – ವೆಬ್ ಸೈಟ್‌ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ 4) ಕಡತಕ್ಕೆ